# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

Superintending Engineer(Ele)
O & M Circle, Keshwapur, Hubballi-23
E-mail ID: seehbl.hescom@gmail.com

Corporate Identity Number (CIN) : U31401KA2002SGC030437

## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

ಪ್ರಕರಣ ಸಂಖ್ಯೆ:246/2019

ವೇದಿಕೆಯ ಸದಸ್ಯರು:

ಶ್ರೀ **ಎಮ್. ಆರ್. ಶಾನಭಾಗ,** ಅಧೀಕ್ಷಕ ಇಂಜಿನೀಯರ(ವಿ) ಕಾ ಮತ್ತು ಪಾ ವೃತ್ತ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ರಾಮಪ್ಪ. ಎನ್. ಎನ್,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.

ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

ಶ್ರೀ ಕೃಷ್ಣಮೂರ್ತಿ ಶಿವಪ್ಪ ಸರ್ವದೆ,
[R R No : **KNO-13582**]
S/o ಪವನ ಕೆ ಸರ್ವದೆ
ರೇವಣಸಿದ್ದೇಶ್ವರ ಪಾರ್ಕ,
ಕುಂದಗೋಳ. .............ದೂರುದಾರರು.

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಉಪ ವಿಭಾಗ,
ಹೆಸ್ಕಾಂ, ಕುಂದಗೋಳ. ..................ಪ್ರತಿವಾದಿಗಳು.

**ಪೀಠಿಕೆ:**

1. ಸ್ಥಾವರ ಸಂಖ್ಯೆ: **KNO-13582,** ಶ್ರೀ ಕೃಷ್ಣಮೂರ್ತಿ ಶಿವಪ್ಪ ಸರ್ವದೆ, ಸಾ: ಕುಂದಗೋಳ, ಇವರ ಹೆಸರಿನಲ್ಲಿ ಗೃಹ ಬಳಕೆಗೆ ಸಂಪರ್ಕಿತಗೊಂಡಿದ್ದು, ಸದರಿ ಸ್ಥಾವರವು 2018 ರ ಪೆಬ್ರವರಿ ತಿಂಗಳಿನಿಂದ MNR ಎಂದು ಪರಿಗಣಿಸಿ, ಪ್ರತಿ ಮಾಹೆಗೆ 68 ಯುನಿಟ್‌ಗಳಂತೆ ಪರಿಗಣಿಸಿ, 09/2018 ರಿಂದ 06/2019 ರ ಅವಧಿಗೆ ರೂ. 1,707/-ಗಳ ಕಂದಾಯ ಕೊರತೆ ಮೊತ್ತವನ್ನು ಆಕರಿಸಿರುತ್ತಾರೆ. MNR ಆದ ಮಾಪಕವನ್ನು ಫೆಬ್ರವರಿ 15-2019 ರಲ್ಲಿ ಬದಲಾಯಿಸಿದ್ದು ಅದರು ಉಪಯೋಗಿಸಿರುವ ವಿದ್ಯುತ್ ಮೀಟರ್‌ನ್ನು ಅಳವಡಿಸಿರುತ್ತಾರೆ. ಗ್ರಾಹಕರಿಗೆ ಆಕರಿಸಿರುವ ಹೆಚ್ಚುವರಿ ವಿದ್ಯುತ್ ಶುಲ್ಕವನ್ನು ಹೆಸ್ಕಾಂ, ಗ್ರಾಹಕರಿಗೆ ವಿಧಿಸುವ ಬಡ್ಡಿದರದೊಂದಿಗೆ ಮುಂದೆ ಬರಲಿರುವ ವಿದ್ಯುತ್ ಬಳಕೆ ಶುಲ್ಕಕ್ಕೆ ಸರಿಹೊಂದಿಸಿಕೊಳ್ಳುವಂತೆ ವಿನಂತಿಸಿ ಗ್ರಾಹಕರ ಪರವಾಗಿ ಅವರ ಮಗ ದಿನಾಂಕ:31-10-2019 ರಂದು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ 'ಎ' ನಮೂನೆಯೊಂದಿಗೆ ಅರ್ಜಿ ಸಲ್ಲಿಸಿರುತ್ತಾರೆ.
2. ಶ್ರೀ ಕೃಷ್ಣಮೂರ್ತಿ ಶಿವಪ್ಪ ಸರ್ವದೆ, ಸಾ: ಕುಂದಗೋಳ, ಇವರ ಹೆಸರಿನಲ್ಲಿ ಸ್ಥಾವರ ಸಂಖ್ಯೆ: **KNO-13582** ಗೃಹೋಪಯೋಗಕ್ಕೆ ಸಂಪರ್ಕಿತಗೊಂಡಿದ್ದು, ಗ್ರಾಹಕರು ಸ್ಥಾವರದ ಮಾಪಕವು ಅಗಷ್ಟ-2018 ರ ಮಾಹೆಯಲ್ಲಿ '0' ಬಳಕೆ ಬಂದ ಕಾರಣ ಮಾಪಕ ಓದುಗರನ್ನು ವಿಚಾರಿಸಿದಾರ ಮೀಟರ್ ಎಂ.ಎನ್.ಅರ್ ನಮೂಧಿಸಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಸದರಿ ಸ್ಥಾವರದ ಮಾಪಕವನ್ನು ದಿನಾಂಕ: 10-09-2018 ರಿಂದ ಎಂ.ಎನ್.ಆರ್ ಎಂದು ಪರಿಗಣಿಸಿ ಸೆಪ್ಟೆಂಬರ್-2018 ರಿಂದ

......2

ಜೂನ್-2019 ರ ಅವಧಿಗೆ ಕೆ.ಇ.ಆರ್.ಸಿ. ನಿಮಯಾವಳಿ ಕ್ಲಾಜ್ 27.04 ಪ್ರಕಾರ ಉಪ ವಿಭಾಗ ಕಛೇರಿಯಿಂದ 68 ಯುನಿಟ್‌ಗಳಿಗೆ ಬೇಡಿಕೆ ಮೊತ್ತ ರೂ. 1707/-ಗಳನ್ನು ಆಕರಣೆ ಮಾಡಲಾಗಿದೆ ಮತ್ತು ಕ್ಲಾಜ್ 27.04 ಪ್ರಕಾರ 6 ತಿಂಗಳು ಒಳಗಾಗಿ ಮೀಟರ್ ಬದಲಾಯಿಸಲಾಗಿದ್ದಿರುತ್ತದೆ. ಗ್ರಾಹಕರು 'ಎ' ಫಾರ್ಮರಲ್ಲಿ ಸಲ್ಲಿಸಿರುವ ದೂರಿನ ಅನಸಾರ ಈಗಾಗಲೇ ಸರಾಸರಿ ಬೇಡಿಕೆ ಮಾಡಿರುವ ಬಳಕೆ ಯುನಿಟ್‌ಗಳನ್ನು ಮೀಟರ್ ಬದಲಾಯಿಸಿದ ನಂತರದ ಬಳಕೆಯ ಅನುಸಾರ ಹೆಚ್ಚು ಅಥವಾ ಕಡಿಮೆ ಮಾಡಲು Conditions of Suply ನಲ್ಲಿ ಅವಕಾಶ ಇರುವುದಿಲ್ಲವೆಂದು ತಿಳಿಸಿ, ಗ್ರಾಹಕರಿಗೆ ವಿಧಿಸುವ ಬಡ್ಡಿದರದೊಂದಿಗೆ ಮುಂದೆ ಬರಲಿರುವ ವಿದ್ಯುತ್ ಬಳಕೆ ಶುಲ್ಕಕ್ಕೆ ಸರಿಹೊಂದಿಸಿಕೊಳ್ಳುವ ವಿನಂತಿಸಿ ಗ್ರಾಹಕರು ಕೋರಿಕೊಂಡಿರುವ ಮನವಿಯನ್ನು ಕೈಬಿಡುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)ರವರ ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

3. ಸದರ ಪ್ರಕರಣವನ್ನು ದಿನಾಂಕ: 19-11-2019 ರಂದು ವಿಚಾರಣೆಯನ್ನು ನಡೆಸಲಾಯಿತು. ಆಗ ಈ ಕೆಳಗಿನವರು ಹಾಜರಿದ್ದರು.

| ಗ್ರಾಹಕರು ಪರವಾಗಿ | ನಿಗಮದ ಪರವಾಗಿ |
|---|---|
| ಶ್ರೀ ಪವನ ಕೆ ಸರ್ವದೆ | ಶ್ರೀ ಟಿ ಕೆ ಲಮಾಣಿ |
| | ಸ.ಕಾ.ನಿ.ಇಂ(ವಿ) |
| | ಕಾ ಮತು ಪಾ ಉಪ ವಿಭಾಗ, ಕುಂದಗೋಳ. |

**ಗ್ರಾಹಕರ ಪರವಾಗಿ ಶ್ರೀ ಪವನ ಕೆ ಸರ್ವದೆ, ಕುಂದಗೋಳ ಇವರ (ಎ) ಫಾರ್ಮನೊದಿಗೆ ಸಲ್ಲಿಸಿದ ಲಿಖಿತ ಹೇಳಿಕೆ ಈ ಕೆಳಗಿನಂತಿರುತ್ತದೆ:**

ತಮ್ಮಲ್ಲಿ ವಿನಂತಿಸಿಕೊಳ್ಳುವುದು ಏನೆಂದರೆ ನಮ್ಮ ಮನೆಯ R.R ನಂಬರ್ **KNO-13582** ಕ್ಕೆ ಸಂಬಂಧಿಸಿದಂತೆ 2018 ರ ಪೆಬ್ರವರಿ ತಿಂಗಳಿನಿಂದ MNR ಎಂದು ಪರಿಗಣಿಸಿ ಪ್ರತಿ ತಿಂಗಳು 68 ಯುನಿಟ್ ವಿದ್ಯುತ್‌ನ್ನು ಬಳಕೆ ಮಾಡಿರುತ್ತಾರೆ ಎಂದು ಶುಲ್ಕವನ್ನು ಭರಿಸಿಕೊಂಡಿರುತ್ತಾರೆ. MNR ಎಂದು ಪರಿಗಣಿಸಿದ್ದು, 10-2017 ರಲ್ಲಿ ಆದರೆ ಪರಿಗಣಿಸಿರುವ ತಿಂಗಳು ತಪ್ಪಾಗಿದೆ. 03 ತಿಂಗಳಲ್ಲಿ MNR ಆದಂತಹ ಮೀಟರ್‌ನ್ನು ಬದಲಾಯಿಸುವ ನಿಯಮವಿದ್ದರೂ 12 ತಿಂಗಳುಗಳ ನಂತರ ಬಳಸಿರುವ ಮೀಟರ್‌ನ್ನು ನಮ್ಮ ಮನೆಗೆ ಅಳವಡಿಸಿರುತ್ತಾರೆ. ಫೆಬ್ರವರಿ 15-2019 ರಂದು ಬದಲಿಸಿದ ವಿದ್ಯುತ್ ಮೀಟರ್‌ನ ಬಿಲ್ಲನ್ನು ನೀಡಬೇಕೆಂದು ನಿಯಮವಿದೆ ನಾನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕುಂದಗೋಳ ಇವರಿಗೆ ನೀಡುವ ಅರ್ಜಿ ಪ್ರತಿಗಳನ್ನು ಮತ್ತು ಸದರಿಯವರಿಂದ ನನಗೆ ಬಂದಿರುವ ತಪ್ಪಾದ ಹಿಂಬರಹವನ್ನು ಹಾಗೂ ಕಾರ್ಯ ಮತ್ತು ಪಾಲನೆ ವಿಭಾಗ ಗ್ರಾಮೀಣ ಹುಬ್ಬಳ್ಳಿ ಇವರಿಗೆ ಸಲ್ಲಿಸಿರುವ ವಿನಂತಿ ಅರ್ಜಿಯನ್ನು ಈ ಅರ್ಜಿಯೊಂದಿಗೆ ಲಗತ್ತಿಸಿದ್ದೇನೆ. ಆದ್ದರಿಂದ ತಾವುಗಳು ಈ ಕುರಿತು ಗಮನವಹಿಸಲು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

**ನಿಗಮದ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಉಪ ವಿಭಾಗ, ಹೆಸ್ಕಾಂ, ಕುಂದಗೋಳ ಇವರು ದಿನಾಂಕ:19-11-2019 ರಂದು ವಿಚಾರಣೆಗೆ ಹಾಜರಾಗಿ, ವೇದಿಕೆಗೆ ಉಪ ವಿಭಾಗದಿಂದ ಸಲ್ಲಿಸಿದ ವಿವರಣಾ ಪತ್ರ ಸಂಖ್ಯೆ:2693 ದಿನಾಂಕ:12-11-2019 ರಲ್ಲಿನ ವಿವರಣೆಯನ್ನೇ ಈ ದಿನದ ಲಿಖಿತ ಹೇಳಿಕೆಯನ್ನಾಗಿ ಪರಿಗಣಿಸುವಂತೆ ವಿನಂತಿಸಿರುತ್ತಾರೆ. ಪತ್ರದಲ್ಲಿನ ವಿವರಣೆ ಈ ಕೆಳಕಂಡಂತಿರುತ್ತದೆ.**

ಕುಂದಗೋಳ ಉಪವಿಭಾಗದ ಕುಂದಗೋಳ ಶಾಖೆಯ ಕುಂದಗೋಳ ಪಟ್ಟಣದ ಸ್ಥಾವರ ಸಂಖ್ಯೆ: KNO13582 ರ ಗ್ರಾಹಕರಾದ ಶ್ರೀ ಕೃಷ್ಣಮೂರ್ತಿ ಶಿವಪ್ಪ ಸರ್ವದೆ ಇವರ ಸ್ಥಾವರಕ್ಕೆ ಕಂದಾಯ ಕೊರತೆ ಬೇಡಿಕೆ ಮಾಡಿರುವ ಬಗ್ಗೆ ವಿವರಣೆಯನ್ನು ಈ ಕೆಳಗಿನಂತೆ ತಮ್ಮ ಗಮನಕ್ಕೆ ತರಬಯಸುತ್ತೇನೆ;

1) ವಿದ್ಯುತ್ ಸಂಪರ್ಕ ದಿನಾಂಕ:19-05-2010 ಮಂಜೂರಾದ ಭಾರ :1.5 ಕಿ.ವ್ಯಾ [ಗೃಹ ಬಳಕೆ]
2) ಸ್ಥಾವರದ ವಿದ್ಯುತ್ ಮೀಟರ್ ಎಂ.ಎನ್.ಆರ್. ದಿನಾಂಕ:10-09-2018

......3

3) ಮೀಟರ್ ಬದಲಾಯಿಸುವ ದಿನಾಂಕ:19-02-2019 ಕಂದಾಯ ಶಾಖೆಯಲ್ಲಿ ಗಣಕಯಂತ್ರದಲ್ಲಿ ಮಾಪಕದ ವಿವರ ಅಳವಡಿಸಿರುವ ದಿನಾಂಕ:13-06-2019.

4) ಅಗಷ್ಟ-2018 ರ ಮಾಹೆಯಲ್ಲಿ '0' ಬಳಕೆ ಬಂದ ಕಾರಣ ಮಾಪಕ ಓದುಗರು ವಿಚಾರಿಸಿದಾಗ ಮೀಟರ್ ಎಂ.ಎನ್.ಆರ್ ನಮೂಧಿಸಿರುವುದು ಕಂಡು ಬರುತ್ತದೆ ಹಾಗೂ ಮಾರ್ಚ-2018 ರಿಂದ ಮೀಟರಲ್ಲಿ ಬಳಕೆ ಪ್ರಮಾಣ ಕಡಿಮೆಯಾಗುತ್ತಾ ಬಂದಿರುತ್ತದೆ.

5) ಅಗಷ್ಟ-2018 ಮಾಹೆಯಲ್ಲಿ ಗ್ರಾಹಕರು ಈ ಕಛೇರಿಗೆ ಬಂದು ಖುದ್ದಾಗಿ ವಿಚಾರಣೆ ಮಾಡಿ ಕಂದಾಯ ಕೊರತೆ ಕಂಡು ಹಿಡಿದ ಬಿಲ್ ಮೊತ್ತವನ್ನು ಪಾವತಿಸಿರುತ್ತಾರೆ.

6) ಕಂದಾಯ ಕೊರತೆ ಮೊತ್ತ ಪ್ರೊವಿಜನಲ್ ಬಿಲ್ ಪ್ರಕಾರ 1470/- ಆಗಿದ್ದು, ಹಾಗೂ ಜುಲೈ-2018 ರ ಬಾಕಿ ಮೊತ್ತ 162/- ಒಟ್ಟು 1707 ರೂ ಆಗಿದ್ದು, ಸದರಿ ಗ್ರಾಹಕರು 1700 ರಶೀದಿ ಸಂಖ್ಯೆ:75632 ದಿನಾಂಕ:31-08-2018 ರಂದು ಪಾವತಿಸಿರುತ್ತಾರೆ.

7) ಸಪ್ಟೆಂಬರ್-2018 ರಿಂದ ಜೂನ್-2019 ರವರೆಗೆ ಗ್ರಾಹಕರಿಗೆ ಪ್ರತಿ ತಿಂಗಳು ಸರಾಸರಿ 68 ಯುನಿಟ್ ವಿದ್ಯುತ್ ಬಳಕೆ ಪ್ರಕಾರ ಕಂದಾಯ ಬೇಡಿಕೆ ಮಾಡಿದಲ್ಲಿ ಸದರಿಯವರು ಬಿಲ್ಲ ಮೊತ್ತವನ್ನು ಪಾತಿಸಿರುತ್ತಾರೆ.

**ಸಿ.ಜಿ.ಆರ್.ಎಫ್ ಅಡಿಯಲ್ಲಿ ಕೋರಿರುವ ಮಾಹಿತಿಯಂತೆ,**

1) ಮೀಟರ್ ಎಮ್.ಎನ್.ಆರ್ ಆದ ಮಾಹೆಯಲ್ಲಿ ಕೆ.ಇ.ಆರ್.ಸಿ ನಿಯಮಾವಳಿ ಕ್ಲಾಜ್ ಸಂಖ್ಯೆ 27.04 ಪ್ರಕಾರ ಈ ಕಛೇರಿಯಿಂದ 68 [Good consumption of immidiate 3 months] ಯುನಿಟ್‌ಗಳಿಗೆ ಬೇಡಿಕೆ ಮಾಡಲಾಗಿರುತ್ತದೆ. ಹಾಗೂ ಕ್ಲಾಜ್ ಸಂಖ್ಯೆ:27.04 ಪ್ರಕಾರ 6 ತಿಂಗಳ ಒಳಗಾಗಿ ಮೀಟರ್ ಬದಲಾಯಿಸಲಾಗಿದೆ.

2) ಗ್ರಾಹಕರ ದೂರಿನ ಅರ್ಜಿಯ ಮೇರೆಗೆ ಈ ಕಛೇರಿಯಿಂದ ಗ್ರಾಹಕರಿಗೆ ವ್ಯವಹರಿಸಿದ ಪತ್ರ ಸಂಖ್ಯೆ:ಕು/ಸಕಾನಿಇಂ(ವಿ)/ಸಲೆಅ/ಕ-/19-20/2121 ದಿನಾಂಕ:27-09-2019.

3) ಗ್ರಾಹಕರು ಪಾರ್ಮ 'ಎ' ರಲ್ಲಿ ದೂರು ಸಲ್ಲಿಸಿರುವ ಅನುಸಾರ ಈಗಾಗಲೇ ಸರಾಸರಿ ಬೇಡಿಕೆ ಮಾಡಿರುವ ಬಳಕೆ ಯುನಿಟ್‌ಗಳನ್ನು ಮೀಟರ್ ಬದಲಾಯಿಸಿದ ನಂತರದ ಬಳಕೆಯ ಅನುಸಾರ ಹೆಚ್ಚು ಅಥವಾ ಕಡಿಮೆ ಮಾಡಲು Conditions of Supply ನಲ್ಲಿ ಇರುವುದಿಲ್ಲ.

## ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಸ್ಥಾವರ ಸಂಖ್ಯೆ: **KNO-13582,** ಶ್ರೀ ಕೃಷ್ಣಮೂರ್ತಿ ಶಿವಪ್ಪ ಸರ್ವದೆ, ಸಾ: ಕುಂದಗೋಳ, ಇವರ ಹೆಸರಿನಲ್ಲಿ ಗೃಹ ಬಳಕೆಗೆ ಸಂಪರ್ಕಿತಗೊಂಡಿದ್ದು, ಸದರಿ ಸ್ಥಾವರವು 2018 ರ ಪೆಬ್ರವರಿ ತಿಂಗಳಿನಿಂದ MNR ಎಂದು ಪರಿಗಣಿಸಿ, ಪ್ರತಿ ಮಾಹೆಗೆ 68 ಯುನಿಟ್‌ಗಳಂತೆ ಪರಿಗಣಿಸಿ, 09/2018 ರಿಂದ 06/2019 ರ ಅವಧಿಗೆ ರೂ. 1,707/-ಗಳ ಕಂದಾಯ ಕೊರತೆ ಮೊತ್ತವನ್ನು ಆಕರಿಸಿರುವುದು ಕಂಡು ಬರುತ್ತದೆ. MNR ಆದ ಮಾಪಕವನ್ನು ಫೆಬ್ರವರಿ 15-2019 ರಲ್ಲಿ ಬದಲಾಯಿಸಲಾಗಿರುತ್ತದೆ. ಗ್ರಾಹಕರಿಗೆ ಆಕರಿಸಿರುವ ಹೆಚ್ಚುವರಿ ವಿದ್ಯುತ್ ಶುಲ್ಕವನ್ನು ಹೆಸ್ಕಾಂ, ಗ್ರಾಹಕರಿಗೆ ವಿಧಿಸುವ ಬಡ್ಡಿದರದೊಂದಿಗೆ ಮುಂದೆ ಬರಲಿರುವ ವಿದ್ಯುತ್ ಬಳಕೆ ಶುಲ್ಕಕ್ಕೆ ಸರಿಹೊಂದಿಸಿಕೊಳ್ಳುವಂತೆ ವಿನಂತಿಸಿ ಗ್ರಾಹಕರ ಪ್ರತಿನಿಧಿಯವರು ದಿನಾಂಕ:31-10-2019 ರಂದು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ ಅರ್ಜಿ ಸಲ್ಲಿಸಿರುವುದು ಕಂಡು ಬರುತ್ತದೆ.

2. ಶ್ರೀ ಕೃಷ್ಣಮೂರ್ತಿ ಶಿವಪ್ಪ ಸರ್ವದೆ, ಸಾ: ಕುಂದಗೋಳ, ಇವರ ಹೆಸರಿನಲ್ಲಿ ಸ್ಥಾವರ ಸಂಖ್ಯೆ: **KNO-13582** ಗೃಹೋಪಯೋಗಕ್ಕೆ ಸಂಪರ್ಕಿತಗೊಂಡಿದ್ದು, ಗ್ರಾಹಕರು ಸ್ಥಾವರದ ಮಾಪಕವು ಅಗಷ್ಟ-2018 ರ ಮಾಹೆಯಲ್ಲಿ '0' ಬಳಕೆ ಬಂದ ಕಾರಣ ಮಾಪಕ ಓದುಗರನ್ನು ವಿಚಾರಿಸಿದಾರ ಮೀಟರ್ ಎಂ.ಎನ್.ಅರ್ ನಮೂಧಿಸಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಸದರಿ ಸ್ಥಾವರದ ಮಾಪಕವನ್ನು ದಿನಾಂಕ:10-09-2018 ರಿಂದ ಎಂ.ಎನ್.ಆರ್ ಎಂದು ಪರಿಗಣಿಸಿ, ಸೆಪ್ಟೆಂಬರ್-2018 ರಿಂದ ಜೂನ್-2019 ರ ಅವಧಿಗೆ ಕೆ.ಇ.ಆರ್.ಸಿ. ನಿಮಯಾವಳಿ ಕ್ಲಾಜ್ 27.04 ಪ್ರಕಾರ ಉಪ ವಿಭಾಗ ಕಛೇರಿಯಿಂದ 68 ಯುನಿಟ್‌ಗಳಿಗೆ ಬೇಡಿಕೆ ಮೊತ್ತ ರೂ. 1707/-ಗಳನ್ನು ಆಕರಣೆ ಮಾಡಿರುವುದು ಕಂಡು ಬರುತ್ತದೆ. ಮತ್ತು ಕ್ಲಾಜ್ 27.04

......4

ಪ್ರಕಾರ 6 ತಿಂಗಳು ಒಳಗಾಗಿ ಮೀಟರ್ ಬದಲಾಯಿಸಿರುವುದು ಕಂಡು ಬರುತ್ತದೆ. ಗ್ರಾಹಕರು 'ಎ' ನಮೂನೆಯಲ್ಲಿ ಸಲ್ಲಿಸಿರುವ ದೂರಿನ ಅನಸಾರ ಈಗಾಗಲೇ ಸರಾಸರಿ ಬೇಡಿಕೆ ಮಾಡಿರುವ ಬಳಕೆ ಯುನಿಟ್‌ಗಳನ್ನು ಮೀಟರ್ ಬದಲಾಯಿಸಿದ ನಂತರದ ಬಳಕೆಯ ಅನುಸಾರ ಹೆಚ್ಚು ಅಥವಾ ಕಡಿಮೆ ಮಾಡಲು Conditions of Suply ನಲ್ಲಿ ಅವಕಾಶ ಇರುವುದಿಲ್ಲವೆಂದು ತಿಳಿಸಿ, ಗ್ರಾಹಕರಿಗೆ ವಿಧಿಸುವ ಬಡ್ಡಿದರದೊಂದಿಗೆ ಮುಂದೆ ಬರಲಿರುವ ವಿದ್ಯುತ್ ಬಳಕೆ ಶುಲ್ಕಕ್ಕೆ ಸರಿಹೊಂದಿಸಿಕೊಳ್ಳುವಂತೆ ವಿನಂತಿಸಿ ಗ್ರಾಹಕರು ಕೋರಿಕೊಂಡಿರುವ ಮನವಿಯನ್ನು ಕೈಬಿಡುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)ರವರ ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡು ಬರುತ್ತದೆ.

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ, ಸದರ ಪ್ರಕರಣದಲ್ಲಿ KERC Conditions of Supply Reg. 29.03 ರ ಪ್ರಕಾರ ಉಪ ವಿಭಾಗಾಧಿಕಾರಿಗಳು ಕ್ರಮ ಜರುಗಿಸದೇ ಇರುವುದು ಮೇಲಿನ ಅಂಶಗಳಿಂದ ಕಂಡು ಬಂದ ಪ್ರಯುಕ್ತ KERC Conditions of Supply Reg. 29.03 ರ ಪ್ರಕಾರ ಕ್ರಮಕೈಗೊಳ್ಳಲು ಪ್ರಕರಣವನ್ನು ಉಪ ವಿಭಾಗಾಧಿಕಾರಿಗೆ ಹಿಂದಿರುಗಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿರುತ್ತದೆ.

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-246/2019/**CYS-1566 **ದಿನಾಂಕ:** 25 NOV 2019

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ಸಿವೈಎಸ್-769 ದಿ.16.07.2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/16-17/ಸಿವೈಎಸ್-3851 ದಿ.28.01.2017 ಮತ್ತು ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/15-16/ಸಿವೈಎಸ್-916 ದಿ.13.06.2018 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1) ಗ್ರಾಹಕರ ಮನವಿಯನ್ನು ಭಾಗಶಃ ಪರಿಗಣಿಸಲಾಗಿದ್ದು, KERC Conditions of Supply Reg.29.03 ರ ಪ್ರಕಾರ ಸದರಿ ಗ್ರಾಹಕರಿಗೆ ಮತ್ತೊಂದು ಅವಕಾಶ ನೀಡಿ, ಪ್ರಕರಣದ ವಿಚಾರಣೆಯನ್ನು ಕೈಗೊಂಡು ಸೂಕ್ತವಾದ ಆದೇಶ ನೀಡಲು ಸೂಚಿಸುತ್ತಾ, ಪ್ರಕರಣವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಉಪ ವಿಭಾಗ, ಹೆಸ್ಕಾಂ, ಕುಂದಗೋಳರವರಿಗೆ ಹಿಂದಿರುಗಿಸಲಾಗಿದೆ.

| | | |
|---|---|---|
| | | **[ON OOD]** |
| **(ರಾಮಪ್ಪ ಎನ್ ಎನ್)** | **(ಲೀಲಾ ಆರ್ ಹಿರೇಮಠ)** | **(ಎಮ್. ಆರ್. ಶಾನಭಾಗ)** |
| ಉಪಲೆಕ್ಕ ನಿಯಂತ್ರಣಾಧಿಕಾರಿ ಹಾಗೂ ಗ್ರಾಕುಂಕೊನಿವೇ ಸದಸ್ಯರು ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ | ಆಯೋಗದಿಂದ ನಿಯೋಜಿಸಲಾ ಸದಸ್ಯರು. | ಅಧೀಕ್ಷಕ ಇಂಜಿನೀಯರ(ವಿ) ಕಾ & ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ ಗ್ರಾ.ಕುಂ.ಕೊ.ನಿ.ವೇದಿಕೆ. |

ಗೆ,

ಶ್ರೀ ಕೃಷ್ಣಮೂರ್ತಿ ಶಿವಪ್ಪ ಸರ್ವದೆ,
[R R No : **KNO-13582**]
S/o ಪವನ ಕೆ ಸರ್ವದೆ
ರೇವಣಸಿದ್ದೇಶ್ವರ ಪಾರ್ಕ,
ಕುಂದಗೋಳ.

**"ನೊಂದಣಿ ಅಂಚೆ ಮೂಲಕ"**

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ., ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ. ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಉಪ ವಿಭಾಗ, ಹುವಿಸಕಂನಿ., ಕುಂದಗೋಳರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.**[ನೊಂದಾಯಿತ ಅಂಚೆ ಮೂಲಕ]**
5. ಮಹಾ ಕಡತ.